ತ್ಯಜಿಸುತ್ತಾರೆ. ಈಗಿರುವ ನನ್ನ ಹೆಸರು ನನ್ನ ಪುನರ್ಜನ್ಮದ್ದು ಎಂದು ನೀವು ಭಾವಿಸಿಕೊಳ್ಳಿ, ಅಷ್ಟು ಸಾಕು. ಅಕ್ಷರಿ ಎನ್ನುವುದು ಅಂಕಿತನಾಮ, ಗುರುತಿಗಾಗಿ. ಗುರು ಎನ್ನುವುದು ಗುಣನಾಮ. ಆದರೆ ಶಬ್ದದ ನಿಜ ಅರ್ಥದಲ್ಲಿ ನಾನು ಎಂಥ ಗುರುವೂ ಅಲ್ಲ. ಯಾವುದೇ ಗುಣ ಅಥವಾ ಜ್ಞಾನ ಇರುವನೂ ಅಲ್ಲ. ಸ್ವಲ್ಪ ಕೇಳಿ, ಸ್ವಲ್ಪ ನೋಡಿ, ಸ್ವಲ್ಪ ಓದಿ, ಸ್ವಲ್ಪ ಅನುಭವದಿಂದ ಒಂದಿಷ್ಟು ಕಲಿತಿದ್ದೇನೆ.

ಕೆಲವು ವರ್ಷಗಳ ಹಿಂದೆ ಇದೇ ರೀತಿ ನಿಮ್ಮ ರಾಜ್ಯದವರಾದ ಒಬ್ಬರು 'ಗುರು'ವಿನ ಪರಿಚಯವಾಯಿತು. ನನ್ನ 'ಗುರು' ಎಂಬ ಅಂಟು ನಾಮದಂತೆ ಗುರು ಎಂಬ ಅಂಟುನಾಮ ಇಟ್ಟುಕೊಂಡವರು ಇಲ್ಲಿ ಸಾವಿರಾರು ಮಂದಿ ಇದ್ದಾರೆ. ಕೆಲವರು 'ಸ್ವಾಮಿ' ಎಂದಿಟ್ಟುಕೊಳ್ಳುತ್ತಾರೆ; ಕೆಲವರು 'ತೀರ್ಥ' ಎಂದಿಟ್ಟುಕೊಳ್ಳುತ್ತಾರೆ. ಇನ್ನೂ ಬೇರೆ ಬೇರೆ ಇದೆ. ಅತಿ ಹೆಚ್ಚು 'ಗುರು' ಎಂಬುದು. ನಾನು ತುಂಬ ಓದಿದವನಲ್ಲ. ಕಾಲೇಜಿಗೇನೋ ಹೋಗಿದ್ದೇನೆ ಡಿಗ್ರಿ ಕೂಡ ಪಡೆದಿದ್ದೇನೆ. ಅಧ್ಯಾತ್ಮ ಶಾಸ್ತ್ರ ಅದು ಇದು ಏನೂ ನನಗೆ ಗೊತ್ತಿಲ್ಲ. ಎಲ್ಲಾದರೂ ಏನಾದರೂ ತಿನ್ನಲು ಸಿಕ್ಕಿದರೆ ತಿನ್ನುವುದು, ಎಲ್ಲಿಯಾದರೂ ಕುಳಿತು ಧ್ಯಾನ ಮಾಡುವುದು, ಎಲ್ಲೆಲ್ಲಿಗೋ ಹೋಗುವುದು ಎಲ್ಲಿಯಾದರೂ ಮಲಗುವುದು. ಬದುಕು ಇಷ್ಟೆ.

ಇಷ್ಟು ಮಾತಾಡುವಾಗಾಗ ಗುರು ಅಕ್ಷರಿಯ ಮುಖದಲ್ಲಿ ಪ್ರಸನ್ನತೆ ಇತ್ತು. ನಗು ಇರಲಿಲ್ಲ. ನಗು ಇಲ್ಲಿ ನಿಷಿದ್ಧವೇನೋ ಎಂದನಿಸಿತು ಅಭಿಗೆ. ನಿಮ್ಮ ರಾಜ್ಯದ ಆ ಗುರು ನನಗೆ ಕೆಲವು ಪದಗಳನ್ನು ಕೀರ್ತನೆಯ ಸಾಲುಗಳನ್ನು ಕಲಿಸಿದ. ಅರ್ಥವನ್ನು ವಿವರಿಸಿ ಹೇಳಿದ. ಅವನ ಒಡನಾಟದಲ್ಲಿ ನಾನು ಸ್ವಲ್ಪ ಕನ್ನಡವನ್ನು ಕೂಡ ಕಲಿತುಕೊಂಡೆ.

'ಅವರು ಹೇಳಿಕೊಟ್ಟದ್ದರಲ್ಲಿ ನಿಮಗೆ ಏನಾದರೂ ನೆನಪಿದೆಯೆ?' ಅಭಿ ಕೇಳಿದ.

'ಅದರಲ್ಲಿ ನನಗೆ ಆಗಾಗ ನೆನಪಿಗೆ ಬರುವ ಎರಡು ಸಾಲುಗಳಿವೆ. ಅದು ಒಬ್ಬ ಕವಿಯ ಕವನದಲ್ಲಿರುವ ಸಾಲುಗಳು ಎಂದು ಅವನು ಹೇಳಿದ. ನಾನು ಅದನ್ನು ನನ್ನ ಬದುಕಿನ ಸಿದ್ಧಾಂತವಾಗಿಸಿಕೊಂಡಿದ್ದೇನೆ. ಬೇರೇನೂ ಕಲಿಯಬೇಕಾಗಿಲ್ಲ. ಅಷ್ಟು ಸಾಕೆಂದುಕೊಂಡಿದ್ದೇನೆ'

'ನೆನಪಿದೆ ಅಂದಿರಲ್ಲಾ, ದಯವಿಟ್ಟು ಆ ಸಾಲುಗಳನ್ನು ಹೇಳಿ' ಎಂದ ಅಭಿ.

'ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು?
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?
ಪಂಚಮರ ಶಿಶುವೊಂದು ಕೆರೆಯಲ್ಲಿ ಮುಳುಗುತಿರೆ
ದಡದಲ್ಲಿ ನೋಡುತ್ತ ನಿಂತಿರುವ ನಾನು
ಸುಮ್ಮನಿದ್ದರೆ ಶಾಸ್ತ್ರವಹುದೇನು?'

ಗುರು ಅಕ್ಷರಿ ಸರಳವಾಗಿ ಸುಶ್ರಾವ್ಯವಾಗಿ ಹಾಡಿದರು. ಅಭಿಯ ಕಣ್ಣುಗಳಲ್ಲಿ ಕಣ್ಣೀರುಕ್ಕಿತು. ಅಭಿ ಗುರು ಅಕ್ಷರಿಯ ಎರಡೂ ಕೈಗಳನ್ನು ಹಿಡಿದುಕೊಂಡು ನಮಿಸಿದ.

'ಆ ನಾಲ್ಕು ಸಾಲುಗಳಲ್ಲಿ ವಿಶ್ವ ಮಾನವೀಯತೆ ಅಡಗಿದೆ' ಎಂದರು ಗುರು ಅಕ್ಷರಿ.

'ನಿಮಗೆ ಆ ಕರ್ನಾಟಕದ ಗುರುವಿನ ನೆನಪಿದೆಯೆ?' ಅಭಿ ಕೇಳಿದ.

'ನೆನಪಿದೆ. ಗುರು ಆರುಣಿ ಎಂದು ಅವರ ಹೆಸರು. ಆದರೆ ಅವರು ಎಲ್ಲಿಗೋ ಹೋದರು. ಮೂವತ್ತು ವರ್ಷಗಳಾದವು. ಅವರು ಎಲ್ಲಿಯೂ ಕಾಣಿಸಲಿಲ್ಲ. ನೀವು ಇಲ್ಲಿಗೆ ಕೇವಲ ಯಾತ್ರಾರ್ಥಿಯಾಗಿ ಬಂದಿದ್ದೀರಾ?' ಗುರು ಅಕ್ಷರಿ ಕೇಳಿದರು.

'ಕೇವಲ ಯಾತ್ರಾರ್ಥಿಯಾಗಿ ಅಲ್ಲ. ನಾನು ಬಂದಿರುವುದು. ದೇವರಂತೆ ಪ್ರೀತಿಸುವ ವ್ಯಕ್ತಿಯನ್ನು ಹುಡುಕುತ್ತಾ ಬಂದಿದ್ದೇನೆ' ಅಭಿಯೆಂದ.

'ದೇವರನ್ನು ಪ್ರೀತಿಸಲು ಸಾಧ್ಯವಿಲ್ಲ, ಪೂಜಿಸಲು ಮಾತ್ರ ಸಾಧ್ಯ' ಗುರು ಅಕ್ಷರಿ ಹೇಳಿದರು.

'ಅದು ನಿಜ. ಆದರೆ ನಾನು ಹೇಳಿದ್ದರ ಅರ್ಥ ಏನೆಂದರೆ, ನಾನು ಪ್ರೀತಿ ಮತ್ತು ಪೂಜೆ ಒಂದೇ ಎಂಬಂತೆ ಯಾವ ವ್ಯಕ್ತಿಯನ್ನು ಪ್ರೀತಿಸುತ್ತೇನೋ ಆ ವ್ಯಕ್ತಿಯನ್ನು, ಅಂದರೆ ನನ್ನ ದೇವರನ್ನು ಹುಡುಕುತ್ತಾ ಇದ್ದೇನೆ'.

ಗುರು ಅಕ್ಷರಿ ಹೇಳಿದ, 'ಇಲ್ಲಿ ಇತ್ತೀಚೆಗೆ ಕೆಲವು ಬದಲಾವಣೆಗಳು ಉಂಟಾಗಿವೆ. ನನ್ನ ಹಾಗೆ ಇರುವವಲ್ಲಿ ಹೆಚ್ಚಿನವರು ತಮ್ಮ ಉದ್ದುದದ ಹೆಸರುಗಳನ್ನು ಮತ್ತು ಅಂಟು ಹೆಸರುಗಳನ್ನು ತ್ಯಜಿಸಿ ಕೇವಲ 'ಗುರು' ಎಂಬುದನ್ನೇ ಮುಖ್ಯ ಹೆಸರಾಗಿಟ್ಟುಕೊಂಡು ಅಂಕಿತನಾಮವಾಗಿ 'ಗುರು' ಎಂಬ ಒಂದೇ ಶಬ್ದದ ಹೆಸರನ್ನು ಇಟ್ಟುಕೊಂಡಿದ್ದಾರೆ. ಆದ್ದರಿಂದ ಎಲ್ಲರೂ ಸಮಾನ ಯಾರೂ ಮೇಲೆ ಅಲ್ಲ, ಯಾರೂ ಕೆಳಗೆ ಅಲ್ಲ, ಎಲ್ಲರೂ ಕೇವಲ 'ಗುರುಗಳು' ಎಂದು ನಕ್ಕ ಅಕ್ಷರಿ, 'ಗುರು' ಎಂಬುದು ಗುಣಸೂಚಕ ಅಲ್ಲ, ಅಷ್ಟೇ ಅಲ್ಲ, 'ಗುರು' ಅಲಿಂಗಿ ನಾಮ. ಗಂಡು ಹೆಣ್ಣು ಯಾರು ಬೇಕಾದರೂ 'ಗುರು' ಎಂದು ಕರೆಸಿಕೊಳ್ಳಬಹುದು. ಇನ್ನೂ ಒಂದು ವಿಚಾರ, ಬಹಳ ಮುಖ್ಯವಾದದ್ದು. ಬಹುತೇಕ ಎಲ್ಲಾ 'ಗುರು'ಗಳೂ ಬಹುವಚನ ಸಂಬೋಧನೆಯನ್ನು ಅಹಂಕಾರಸೂಚಕ ಎಂದು ಭಾವಿಸುತ್ತಾರೆ. ಆದ್ದರಿಂದ ಏಕವಚನದಲ್ಲೇ ಸಂಬೋಧಿಸಿ ಎಂದು ಹೇಳುತ್ತಾರೆ. ನೀನು ನನ್ನನ್ನು ಏಕವಚನದಲ್ಲಿ ಮಾತಾಡಿಸು, ನಾನು ಕೂಡ ನಿನ್ನನ್ನು ಏಕವಚನದಲ್ಲಿ ಸಂಬೋಧಿಸುತ್ತೇನೆ. ಪ್ರಪಂಚದಲ್ಲಿ ಏಕವೂ ಅಲ್ಲದ, ಬಹುವೂ ಅಲ್ಲದ ಒಂದೇ ವಚನ ಇರಲಿ, ಎಲ್ಲರೂ ಒಂದೇ ಆಗಿರಲಿ, ಮಾನವರಾಗಿರಲಿ, ಅಲ್ಲವೇ ಅಭಿ?'

'ಹೌದು, ಇದು ಬಹಳ ಸಂತೋಷದ ವಿಷಯ. ಪ್ರಪಂಚದಲ್ಲಿ ಇದನ್ನು ಮೊಟ್ಟ ಮೊದಲು ತಮ್ಮ ಭಾಷೆಯಲ್ಲಿ ಈ ಬಳಕೆಗೆ ತಂದವರು ಬ್ರಿಟಿಷರು ಅಂತ ತೋರುತ್ತೆ, ಅಲ್ಲವೆ ಗುರು?'

'ಹೌದು. ಸಂಖ್ಯಾಸೂಚಕ ಬಹುವಚನ ಎಲ್ಲಾ ಭಾಷೆಗಳಲ್ಲೂ ಇದೆ. ಅಗತ್ಯ ಕೂಡ ಮನುಷ್ಯನಿಗೆ ಇದೆ. ಭಾಷೆಗೂ ಇದೆ. ಆದರೆ ಗೌರವ ಸೂಚಕ ಬಹುವಚನ ಎಲ್ಲಾ ಭಾಷೆಗಳಲ್ಲಿ ಇಲ್ಲ. ಅದರ ಅಗತ್ಯವೂ ಇಲ್ಲ. ಯಾಕೆಂದರೆ ಗೌರವ ಅವ್ಯಕ್ತವಾಗಿ ಅಂತರಂಗದಲ್ಲಿರುವಂಥದು; ಅದು ಮಾತಿನಲ್ಲಿ ಇದೆ ಅಥವಾ ಇಲ್ಲ ಎನ್ನುವುದು ಕೊಡುವ ಭಾವನೆ ಇರುವ ಮತ್ತು ಪಡೆಯುವ

## ಇಲ್ಲಿಯವರೆಗೆ



ಸನ್ಮತಿ ನರಹರಿಯ ಮೇಲೆ ಮೋಹಿತಳಾದ ಮೇಲೆ ವರ್ತನೆಯಲ್ಲೂ ಬದಲಾವಣೆಯಾಯಿತು. ಈ ಬದಲಾವಣೆಯನ್ನು ಅಭಿ ಗುರುತಿಸಿದರೂ ಆತನಿಗೆ ಯಾವುದೂ ಸ್ಪಷ್ಟವಾಗಿ ಅರ್ಥವಾಗುತ್ತಿರಲಿಲ್ಲ. ಅಭಿಯ ಅಮ್ಮ ತೊಟ್ಟುಕೊಳ್ಳುತ್ತಿದ್ದ ಆಭರಣಗಳೆಲ್ಲ ಸನ್ಮತಿಯ ಮೈಮೇಲೆ ಕಾಣತೊಡಗಿತು. ಇದು ಮತ್ತಷ್ಟು ಸಂಶಯಕ್ಕೆ ನಾಂದಿಯಾಯಿತು. ಅಭಿ ಜಪಾನಿಗೆ ಹೋಗುತ್ತಾನೆ. ಅಮರೇಶ ಸನ್ಮತಿಯನ್ನು ಕಾಣಲು ಬರುತ್ತಾನೆ. ಇಬ್ಬರೂ ಲಿವಿಂಗ್ ಟುಗೆದರ್ ಸಂಬಂಧ ಇಟ್ಟುಕೊಂಡಿರುತ್ತಾರೆ. ಆದರೆ ಬಾಹ್ಯ ಜಗತ್ತಿಗೆ ಅಣ್ಣ ತಂಗಿ ಹೇಳಿಕೊಂಡಿರುತ್ತಾರೆ. ಅಮರೇಶ–ಸನ್ಮತಿ ಉಪಾಯದಿಂದ ದಾಖಲೆಪತ್ರದಲ್ಲಿ ನರಹರಿಯ ಸಹಿ ತೆಗೆದುಕೊಂಡು ಸಮಸ್ತ ಆಸ್ತಿ ಮನೆಯನ್ನು ತಮ್ಮ ಹೆಸರಿಗೆ ಬರೆಸಿಕೊಂಡಿರುತ್ತಾರೆ. ಇದು ಅಭಿ, ಸುಕೃತಿ ಯಾರಿಗೂ ತಿಳಿದಿರುವುದಿಲ್ಲ. ಅಭಿ ಇಸ್ರೇಲಿಗೂ ಹೋಗಿ ವಾಪಸ್ ಬರುತ್ತಾನೆ. ಹೊಸೂರಿನಲ್ಲಿ ಅಭಿ–ಮುರಾರಿಯ ಮನೆ ಕಟ್ಟುವ ಕೆಲಸ ಭರದಿಂದ ನಡೆಯುತ್ತಿತ್ತು. ಒಂದು ದಿನ ಸನ್ಮತಿ–ಸುಕೃತಿಯ ಮಧ್ಯೆ ಜೋರಾಗಿ ಜಗಳ ನಡೆದು ಅವ್ಯಾಚ್ಯ ಶಬ್ದಗಳಿಂದ ಬೈದುಕೊಳ್ಳುತ್ತಾರೆ.